# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 103/2019

ಸಿಡಬ್ಲು: 7 / ಪಿಡಬ್ಲು: 6

ದಿನಾಂಕ: 20.02.2023

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ದೇವಪ್ಪ ಕುರಿ |
| ತಂದೆ /ಗಂಡನ ಹೆಸರು | : | ಮಲ್ಲಪ್ಪ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ ಸ್ಥಳ | : | ಮುಂಡರಗಿ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ಈಗ ತೋರಿಸಿದ ಮೃತಳ ಶವದ ಪಿ.ಎಂ. ಕಾಲಕ್ಕೆ ವೈದ್ಯರು ಕಾಯ್ದಿರಿಸಿದ ವಸ್ತುಗಳ ಜಪ್ತ ಪಂಚನಾಮೆ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-19 ಎಂದು ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು.

2. ಈಗ 4 ವರ್ಷಗಳ ಹಿಂದೆ ಒಂದು ದಿನ ನಾನು ಮುಂಡರಗಿ ಪೋಲೀಸ ಠಾಣೆಗೆ ಹೋಗಿದ್ದಾಗ ಪೋಲೀಸರು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಆಗ ಮೃತ ಲಕ್ಷ್ಮಿ ಈತಳ ವಿಸ್ರಾಗಳನ್ನು ಅಮಾನತ್ತುಪಡಿಸಿಕೂಂಡು ಪೋಲೀಸರು ಮಹಜರನ್ನು ಮಾಡಿ ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ಪಂಚನೆಮಯನ್ನು ಮದ್ಯಾಹ್ನ 02.00 ರಿಂದ 02.45 ರ ವರೆಗೆ ಮಾಡಲಾಗಿರುತ್ತದೆ. ನನ್ನ ಜೊತೆ ಆ ದಿನ ಪಂಚರಾಗಿ ಚಾಸಾ-8 ರವರೂ ಕೂಡಾ ಇದ್ದರು. ಚಾಸಾ-8 ರವರು ನಿಪಿ-19 ಕ್ಕೆ ಸಹಿ ಮಾಡಿರುತ್ತಾರೆ.

## ಪಾಟಿ ಸವಾಲು: ಶ್ರೀ ಜಿ.ಬಿ. ನೀಲರೆಡ್ಡಿ, 1 ಮತ್ತು 2 ನೇ ಆರೋಪಿತರ ಪರ ವಕೀಲರಿಂದ:

3. ಪೋಲೀಸರು ಪಂಚನಾಮೆಗೆ ಬರಬೇಕೆಂದು ನೋಟೀಸನ್ನು ಕೊಟ್ಟಿರಲಿಲ್ಲ. ನಿಪಿ-19 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ-19 ನ್ನು ಬರೆಯಲು ನಾನು ಮಾಹಿತಿಯನ್ನು ಕೊಟ್ಟಿರುವುದಿಲ್ಲ. ಬರೆದಿಟ್ಟ ನಿಪಿ-19 ಕ್ಕೆ ನಾನು ಸಹಿ ಮಾಡಿರುತ್ತೇನೆ. ಡಬ್ಬಿಯಲ್ಲಿದ್ದ ಪ್ರತಿಯೊಂದು ವಸ್ತುವನ್ನು ತೆಗೆದು ನನಗೆ ತೋರಿಸಿರುವುದಿಲ್ಲ. ಸಾಕ್ಷಿ ಸ್ವತಃ ಕಿಡ್ನಿ, ಹೃದಯ ಇತ್ಯಾದಿ ಇರುತ್ತದೆ ಎಂದು ಪೋಲೀಸರು ಹೇಳಿರುತ್ತಾರೆ ಎಂದು ನುಡಿದಿರುತ್ತಾರೆ.

4. ನಾನು ಮುಂಡರಗಿ ಪೋಲೀಸ ಠಾಣೆಯ ಖಾಯಂ ಪಂಚನಾಗಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡದೇ ಇದ್ದರೂ ಕೂಡಾ ಪೋಲೀಸರಿಗೆ ಅನುಕೂಲ ಮಾಡಬೇಕೆಂದು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

## ಮರು ವಿಚಾರಣೆ – ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**